# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಸಿಡಿ–4290/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 10/05/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಜಾಲ–2 ಹೋಬಳಿ ಹುಣಸಮಾರನಹಳ್ಳಿ ಗ್ರಾಮದ ಸರ್ವೆ ನಂ. 42ರ 9.18 ಎಕರೆ/ಗುಂಟೆ ಜಮೀನಿನಲ್ಲಿ ಅನಧಿಕೃತವಾಗಿ ಬಡಾವಣೆ ನಿರ್ಮಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದ್ದು ಭೂಪರಿವರ್ತನಾ ಶುಲ್ಕ ಇತರೆ ಶುಲ್ಕಗಳನ್ನು ಸರ್ಕಾರಕ್ಕೆ ಪಾವತಿಸದೇ ನಿರ್ಮಿಸಿದ ಬಡಾವಣೆಯು ಕಾನೂನಿಗೆ ವಿರುದ್ಧವಿದ್ದು ಸರ್ಕಾರಕ್ಕೆ ನಷ್ಟ ಉಂಟಾಗಿರುತ್ತದೆ ಈ ಬಗ್ಗೆ ನಿಯಮಾನುಸಾರ ಕ್ರಮ ಜರುಗಿಸುವ–ಕುರಿತು.,

*****

ಶ್ರೀ ಎಂ.ಕೃಷ್ಣಪ್ಪ ಬಿನ್ ಮುನಿಯಪ್ಪ, ಹೊಸಹಳ್ಳಿ ಗ್ರಾಮ, ಹುಣಸಮಾರನಹಳ್ಳಿ ಅಂಚೆ, ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ ಬಾಳಪ್ಪ ಹಂದಿಗುಂದ, ತಹಶೀಲ್ದಾರ್, ತಾಲ್ಲೂಕು ಕಛೇರಿ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ, ಬೆಂಗಳೂರು, ಹಾಲಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, (2) ಶ್ರೀ ಮಹೇಶ್ ಬಾಬು, ಉಪ ವಿಭಾಗಾಧಿಕಾರಿಗಳು, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು ಉತ್ತರ ಉಪ ವಿಭಾಗ, ಬೆಂಗಳೂರು, ಹಾಲಿ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ವೃತ್ತ, ಬೆಂಗಳೂರು, (3) ಶ್ರೀ ಎ.ರಾಜೀವ್, ಪೊಲೀಸ್ ಇನ್ಸ್‌ಪೆಕ್ಟರ್, ಯಲಹಂಕ ಪೊಲೀಸ್ ಠಾಣೆ, ಬೆಂಗಳೂರು ನಗರ ಮತ್ತು, (4) ಶ್ರೀ ಮಂಜುನಾಥ್, ರಾಜಸ್ವ ನಿರೀಕ್ಷಕರು, ಜಾಲ–2, ಬೆಂಗಳೂರು ಉತ್ತರ ಅಪರ ತಾಲ್ಲೂಕು, ಬೆಂಗಳೂರು (ಇನ್ನು ಮುಂದೆ '1 ರಿಂದ 4ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಹುಣಸಮಾರನಹಳ್ಳಿ ಸರ್ವೆ ನಂ. 42ರಲ್ಲಿ 9 ಎಕರೆ 8 ಗುಂಟೆ ಕೃಷಿ ಜಮೀನಿನಲ್ಲಿ ಭೂ ಪರಿವರ್ತನೆಯನ್ನು ಮಾಡಿಸದೆ, ಯಾವ ನಿಯಮವನ್ನು ಪಾಲಿಸದೆ ಅನಧಿಕೃತವಾಗಿ ಬಡಾವಣೆಯನ್ನು ನಿರ್ಮಿಸುತ್ತಿದ್ದಾರೆ. ಅದನ್ನು ತಡೆಯುವಂತೆ ಕೋರಿ ದಿನಾಂಕ: 17/03/2015 ರಂದು ತಹಶೀಲ್ದಾರ್, ಯಲಹಂಕ, ಬೆಂಗಳೂರು ಇವರಿಗೆ ದೂರನ್ನು ಸಲ್ಲಿಸಿದ್ದೇನೆ. ಯಾವುದೇ ಕ್ರಮ ಕೈಗೊಂಡಿಲ್ಲ. ತೆಗೆದುಕೊಂಡಿರುವ ಕ್ರಮದ ಬಗ್ಗೆ ದಿನಾಂಕ: 03/06/2015 ರಂದು ವಿಚಾರಿಸಿದಾಗ ಸದರಿಯವರು ಯಲಹಂಕ ಪೋಲೀಸ್ ರವರಿಗೆ ದೂರನ್ನು ಕೊಟ್ಟಿದ್ದು ಮೊಕದ್ದಮೆ ಸಂಖ್ಯೆ: 209/2015ರಲ್ಲಿ ಭಾರತೀಯ ದಂಡ ಸಂಹಿತೆ ಕಲಂ 406, 420, 468, 471 ರೀತ್ಯಾ ಪ್ರಕರಣ ದಾಖಲಿಸಿದ್ದು ತನಿಖಾ ಹಂತದಲ್ಲಿದೆ ಎಂದು ತಿಳಿಸಿದ್ದಾರೆ. ಅನಧಿಕೃತ ಬಡಾವಣೆಗಳನ್ನು ತಡೆಯುವ ಅಧಿಕಾರ ತಹಶೀಲ್ದಾರ್ ರವರಿಗೆ ಇದ್ದು ಅಧಿಕಾರವನ್ನು ಚಲಾಯಿಸಿ ಅನಧಿಕೃತ ಬಡಾವಣೆಯನ್ನು ತಡೆಯುವಲ್ಲಿ ತಹಶೀಲ್ದಾರ್‌ರು ವಿಫಲರಾಗಿದ್ದಾರೆ. ಕ್ರಮ ಕೈಗೊಳ್ಳಬೇಕಾದಂತಹ ಆರ್.ಐ. ಜಾಲ–2, ಬೆಂಗಳೂರು (ಅಪರ) ತಾಲ್ಲೂಕು ಇವರು ಸಹ ಅಕ್ರಮ ಬಡಾವಣೆಯ ತಡೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಯಲಹಂಕ ಪೋಲೀಸ್ ರವರು ಕ್ರಮ ಕೈಗೊಳ್ಳಲು ವಿಫಲರಾಗಿದ್ದಾರೆ. ದಿನಾಂಕ: 11/08/2015 ರಂದು ಮಾನ್ಯ ಉಪ ವಿಭಾಗಾದಿಕಾರಿಗಳು, ಬೆಂಗಳೂರು ಉತ್ತರ ಉಪ ವಿಭಾಗ ರವರಿಗೆ ಅಗತ್ಯ ಕ್ರಮ ಜರುಗಿಸಿ ಅನಧಿಕೃತ ಬಡಾವಣೆಯನ್ನು ತಡೆಯುವಂತೆ ಕೋರಿ ದೂರನ್ನು ಸಲ್ಲಿಸಿದ್ದು ಉಪ ವಿಭಾಗಾಧಿಕಾರಿಗಳು ಸಹ ಅನಧಿಕೃತ ಬಡಾವಣೆಯನ್ನು ತಡೆಯಲು ಕ್ರಮ ಜರುಗಿಸಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿ ಸರ್ಕಾರಕ್ಕೆ ನಷ್ಟ ಉಂಟಾಗಿರುತ್ತದೆ. ಎದುರುದಾರರು ಕರ್ತವ್ಯವನ್ನು ನಿರ್ವಹಿಸದೆ ವಿಳಂಬ ಧೋರಣೆಯನ್ನು ಅನುಸರಿಸಿ ಅಕ್ರಮ ಬಡಾವಣೆಯ ನಿರ್ಮಾಣಕ್ಕೆ ಸಹಕಾರವನ್ನು ಕೊಟ್ಟಿದ್ದಾರೆ. ಸೂಕ್ತ ಕ್ರಮ ಜರುಗಿಸಬೇಕಾಗಿ ಕೋರಿದೆ.

ದೂರಿನೊಂದಿಗೆ ತಹಶೀಲ್ದಾರ್, ಉಪ ವಿಭಾಗಾಧಿಕಾರಿಗಳಿಗೆ ಕೊಟ್ಟ ಮನವಿ ಪತ್ರದ ಪ್ರತಿ, ಸ್ಥಳದ ಫೋಟೊ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

3. 1ನೇ ಎದುರುದಾರರ ಆಕ್ಷೇಪಣೆ:–

ಹುಣಸಮಾರನಹಳ್ಳಿ ಗ್ರಾಮದ ಸರ್ವೆ ನಂ. 42ರ 9.18 ಎಕರೆ/ಗುಂಟೆ ಜಮೀನು ಮೂಲತ: ಕೃಷಿ ಜಮೀನಾಗಿದ್ದು ಅನಧಿಕೃತ ಬಡಾವಣೆ ನಿರ್ಮಿಸಿದ್ದು, ಸಂಬಂಧಪಟ್ಟ ರಾಜಸ್ವ ನಿರೀಕ್ಷಕರು, ಸದರಿ ಅಕ್ರಮ ಬಡಾವಣೆಗಳನ್ನು ತೆರವುಗೊಳಿಸಲು ಹಲವಾರು ಬಾರಿ ಮೌಖಿಕವಾಗಿ ತಿಳಿಸಿದ್ದಾಗ್ಯೂ ಸಹ ಬಡಾವಣೆ ನಿರ್ಮಾಣ ಕಾರ್ಯ ಮುಂದುವರೆಸಿದ್ದಾರೆಂದು ರಾಜಸ್ವ ನಿರೀಕ್ಷಕರು, ಹುಣಸಮಾರನಹಳ್ಳಿ ವೃತ್ತ, ಜಾಲ ಹೋಬಳಿ ಹಾಗೂ ಉಪ ತಹಶೀಲ್ದಾರ್, ನಾಡ ಕಛೇರಿ, ಜಾಲ–2 ರವರು ವರದಿ ಸಲ್ಲಿಸಿರುತ್ತಾರೆ. ಪ್ರಕರಣ ಸಂಖ್ಯೆ: LND/NCR/Cr.110/2015-16 ರಂತೆ ಪ್ರಕರಣವನ್ನು

ತಹಶೀಲ್ದಾರ್ ನ್ಯಾಯಾಲಯಕ್ಕೆ ಕೈಗೆತ್ತಿಕೊಂಡು, ಪ್ರತಿವಾದಿಗಳಾದ ಮತ್ತು ಅಕ್ರಮ ಬಡಾವಣೆ ನಿರ್ಮಾಣಕ್ಕೆ ಕಾರಣರಾದವರಿಗೆ ನೋಟುಸು ಜಾರಿ ಮಾಡಲಾಗಿ ಇವರ್‍ಯಾರು ಪ್ರಕರಣದ ವಿಚಾರಣೆಗೆ ಹಾಜರಾಗಿರುವುದಿಲ್ಲ ಹಾಗೂ ಯಾವುದೇ ಅಧಿಕೃತ ದಾಖಲಾತಿಗಳನ್ನು ಸಹ ಸಲ್ಲಿಸಿರುವುದಿಲ್ಲ.

ದಿನಾಂಕ: 13/04/2016 ರಂದು ನಾನು ಅಂತಿಮ ಆದೇಶವನ್ನು ಹೊರಡಿಸಿ, ಹುಣಸಮಾರನಹಳ್ಳಿ ಗ್ರಾಮದ ಸರ್ವೆ ನಂ. 42ರ 9.18 ಎ/ಗುಂ ಜಮೀನಿನಲ್ಲಿ ಪ್ರತಿವಾದಿಗಳು ನಿರ್ಮಿಸಿದ್ದ ಬಡಾವಣೆಯನ್ನು ತೆರವುಗೊಳಿಸಲು ಮತ್ತು ಅಕ್ರಮ ಬಡಾವಣೆ ನಿಮಾಣ ಮಾಡಿದವರ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲು ಉಪ ತಹಶೀಲ್ದಾರ್, ನಾಡ ಕಛೇರಿ, ಜಾಲ–2 ಇವರಿಗೆ ಆದೇಶಿಸಿರುತ್ತೇನೆ. ಗ್ರಾಮಸ್ಥರು ಹಾಗೂ ಸ್ಥಳೀಯ ಮುಖಂಡರು ಬಡಾವಣೆ ತೆರವುಗೊಳಿಸಲು ಅಡ್ಡಿಪಡಿಸಿರುತ್ತಾರೆ. ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 95(2) ಹಾಗೂ ಕಲಂ 96ರ ರೀತ್ಯಾ ಈ ಎಲ್ಲಾ ಜಮೀನುಗಳನ್ನು ಋಣ ಮುಕ್ತವಾಗಿ ಸರ್ಕಾರಕ್ಕೆ ಪಡೆಯಲು ಆದೇಶ ನೀಡಲು ಕೋರಿ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಇವರಿಗೆ ಸಲ್ಲಿಸಿರುತ್ತೇನೆ.

4. 2ನೇ ಎದುರುದಾರರ ಆಕ್ಷೇಪಣೆ:–

ಅನಧೀಕೃತ ಬಡಾವಣೆ ನಿರ್ಮಾಣವಾಗುತ್ತಿರುವ ಬಗ್ಗೆ ದಿನಾಂಕ: 11/08/2015 ರಂದು ಉಪ ವಿಭಾಗಾಧಿಕಾರಿಗಳ ಕಾರ್ಯಾಲಯಕ್ಕೆ ಮನವಿ ಸಲ್ಲಿಸಿದ್ದು ಸದರಿ ಮನವಿಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ದಿನಾಂಕ: 21/08/2015 ರಂದು ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು ರವರಿಗೆ ಸೂಚಿಸಿ ಪತ್ರವನ್ನು ಬರೆಯಲಾಗಿರುತ್ತದೆ. ದಿನಾಂಕ: 28/09/2015 ರಂದು ಉಪ ವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪ ವಿಭಾಗ ಹುದ್ದೆಯಿಂದ ವಿಶೇಷ ಭೂಸ್ವಾಧೀನಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು ವರ್ಗಾವಣೆಯಾಗಿರುತ್ತೇನೆ. ಅರ್ಜಿದಾರರು ಸಲ್ಲಿಸಿರುವ ದೂರು ವಿಷಯವು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 96ರಡಿ ಒಳಗೊಂಡ ವಿಷಯವಾಗಿರುತ್ತದೆ. ಅದರಂತೆ ಕಲಂ 96ರ ಅಡಿ ತೆರವುಗೊಳಿಸುವಂತಹ ಪ್ರದತ್ತವಾದ ಅಧಿಕಾರವನ್ನು ಮಾನ್ಯ ಜಿಲ್ಲಾಧಿಕಾರಿಗಳು ಹೊಂದಿರುತ್ತಾರೆ. ಸದರಿ ಅಧಿಕಾರವು ಉಪ ವಿಭಾಗಾಧಿಕಾರಿಗಳಿಗೆ ಇರುವುದಿಲ್ಲ.

5. ದೂರುದಾರರ ಪ್ರತ್ಯುತ್ತರ:–

ಸರ್ವೆ ನಂ. 42ರಲ್ಲಿ ಅನಧಿಕೃತ ಬಡಾವಣೆ ಪೂರ್ಣಗೊಂಡಿದೆ. ಎದುರುದಾರರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಅನಧಿಕೃತ ಬಡಾವಣೆಯನ್ನು ತೆರವುಗೊಳಿಸಲು ಕ್ರಮ ಜರುಗಿಸಲು ಕೋರಿರುತ್ತೇನೆ.

6. ಪಿರ್ಯಾದುದಾರರು ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ 1ನೇ ಎದುರುದಾರರಾದ ತಹಶೀಲ್ದಾರ್‌ರು ಪ್ರಕರಣ ಸಂಖ್ಯೆ: ಎಲ್.ಎನ್.ಡಿ/ಎನ್.ಸಿ.ಆರ್/ಸಿ.ಆರ್/110/2015–16 ರಲ್ಲಿ ದಿನಾಂಕ: 13/04/2016 ರಂದು ಹುಣಸಮಾರನಹಳ್ಳಿ ಗ್ರಾಮದ ಸರ್ವೆ ನಂ. 42ರ 9–18 ಎಕರೆ/ಗುಂಟೆ ಜಮೀನಿನಲ್ಲಿ ಪ್ರತಿವಾದಿಗಳಾದ ವೆಂಕಟೇಶ್ವರಲು, ಅರವಿಂದ್ ಕೆ.ವಿ. ಶ್ರೀಹರಿ, ಜಯಮ್ಮ, ಸುನಂದಮ್ಮ ಮತ್ತು ಸುಮಿತ್ರಮ್ಮ ರವರುಗಳು ಯಾವುದೇ ಭೂಪರಿವರ್ತನೆ ಆದೇಶ ಅಥವಾ ಸಕ್ಷಮ ಪ್ರಾಧಿಕಾರದ ಅನುಮೋದನೆ ಇಲ್ಲದೆ ಅಕ್ರಮವಾಗಿ ನಿರ್ಮಿಸಿರುವ ಬಡಾವಣೆಗಳನ್ನು ತೆರವುಗೊಳಿಸಲು ಉಪ ತಹಶೀಲ್ದಾರ್, ಜಾಲ–2 ಹೋಬಳಿ ರವರಿಗೆ ಆದೇಶಿಸಿದೆ. ಸದರಿ ಬಡಾವಣೆಗಳ ತೆರವು ಕಾರ್ಯಕ್ಕೆ ತಗಲುವ ವೆಚ್ಚವನ್ನು ಪ್ರತಿವಾದಿಗಳಿಂದ ಭೂ ಕಂದಾಯ ಬಾಕಿಯಂತೆ ವಸೂಲು ಮಾಡಲು ಆದೇಶಿಸಿರುತ್ತಾರೆ. ಬಡಾವಣೆ ನಿರ್ಮಿಸಿದ ಬಗ್ಗೆ 4 ಫೋಟೊಗಳನ್ನು ಲಗತ್ತಿಸಿರುತ್ತಾರೆ.

7. 1ನೇ ಎದುರುದಾರರು ತಮ್ಮ ಪತ್ರ ದಿನಾಂಕ: 07/02/2017 ರಲ್ಲಿ ಅನಧಿಕೃತ ಬಡಾವಣೆ ತೆರವುಗೊಳಿಸುವ ವೇಳೆ ಗ್ರಾಮಸ್ಥರು ಹಾಗೂ ಸ್ಥಳೀಯ ಮುಖಂಡರು ಬಡಾವಣೆ ತೆರವುಗೊಳಿಸಲು ಅಡ್ಡಿಪಡಿಸಿರುತ್ತಾರೆ. ಪ್ರಯುಕ್ತ ಸದರಿ ಜಮೀನಿಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 95(2) ಹಾಗೂ ಕಲಂ 96ರ ರೀತ್ಯಾ ಈ ಎಲ್ಲಾ ಜಮೀನುಗಳನ್ನು ಋಣ ಮುಕ್ತವಾಗಿ ಸರ್ಕಾರಕ್ಕೆ ಪಡೆಯಲು ಆದೇಶ ನೀಡಲು ಕೋರಿ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಇವರಿಗೆ ಸಲ್ಲಿಸಿರುತ್ತೇನೆ. ನಂತರ ಪದೋನ್ನತಿ ಹೊಂದಿ ವರ್ಗಾವಣೆಯಾಗಿರುತ್ತೇನೆ ಎಂದು ನಮೂದಿಸಿರುತ್ತಾರೆ.

8. 3ನೇ ಎದುರುದಾರರು ಯಲಹಂಕ ಪೊಲೀಸ್ ಠಾಣೆಯಿಂದ ವರ್ಗಾವಣೆ ಹೊಂದುವ ವೇಳೆ ಕ್ರೈಂ. ನಂ. 209/2015ರ ಕಡತವನ್ನು ತನಿಖೆಗಾಗಿ charge ನೀಡಿರುತ್ತೇನೆ ಎಂದು ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ. 4ನೇ ಎದುರುದಾರರು ಅನಧಿಕೃತ ಬಡಾವಣೆ ತೆರವುಗೊಳಿಸಲು ಕಾಲಾವಕಾಶ ನೀಡಲು ಕೋರಿ ಪತ್ರ ಸಲ್ಲಿಸಿರುತ್ತಾರೆ.

9. 4ನೇ ಎದುರುದಾರರಿಗೆ ನೋಟಿಸು ಜಾರಿಯಾಗಿದ್ದರೂ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ.

ಉಪ ತಹಶೀಲ್ದಾರ್‌ರು ತಮ್ಮ ಪತ್ರ ದಿನಾಂಕ: 02/01/2018 ರಲ್ಲಿ ಜಾಲ–2 ಹೋಬಳಿ ಹುಣಸಮಾರನಹಳ್ಳಿ ಗ್ರಾಮವು ಮೂಲತ: ಜೋಡಿ ಇನಾಂ ಗ್ರಾಮವಾಗಿರುತ್ತದೆ. ಸರ್ವೆ ನಂ. 42ರಲ್ಲಿ 9–18 ಗುಂಟೆ ಜಮೀನು ಮೂಲತ: ಮಂಜೂರಿ ಜಮೀನಾಗಿರುತ್ತದೆ. ದಿನಾಂಕ: 26/03/1983 ರಂತೆ ಫಾರಂ 10 ವಿತರಿಸಿದ್ದು ಕೃಷ್ಣಪ್ಪ ರವರಿಗೆ ಮಂಜೂರಾಗಿರುವುದು ಕಂಡುಬಂದಿರುತ್ತದೆ. 2017–18ರ ಸಾಲಿನ ಆರ್.ಟಿ.ಸಿ. ಯಲ್ಲಿ ಅರವಿಂದ್ ಕೆ.ವಿ. ಶ್ರೀಹರಿ 5–00 ಎಕರೆ ಜಯಮ್ಮ, ಸುನಂದಮ್ಮ,

ಸುಮಿತ್ರಮ್ಮ, ಆಂಜಿನಮ್ಮ, ಭಾಗ್ಯಮ್ಮ 4–18 ಎಕರೆ/ಗುಂಟೆ ಜಂಟಿಯಾಗಿ ಖಾತೆ ನಮೂದಾಗಿರುವುದು ಕಂಡುಬಂದಿರುತ್ತದೆ. ಅನಧಿಕೃತ ಬಡಾವಣೆಯನ್ನು ತೆರವುಗೊಳಿಸಲು ಸಾಧ್ಯವಾಗದ ಕಾರಣದಿಂದ ಗ್ರಾಮಲೆಕ್ಕಿಗರು, ರಾಜಸ್ವ ನಿರೀಕ್ಷಕರು, ಉಪ ತಹಶೀಲ್ದಾರ್ ರವರು ಜಂಟಿಯಾಗಿ ತಾಲ್ಲೂಕಿನ ಸಂಪೂರ್ಣ ಪ್ರಮಾಣದ ಸಿಬ್ಬಂದಿ, ಪೊಲೀಸ್‌ರ ರಕ್ಷಣೆ ನೀಡಲು ಕೋರಿ ವರದಿ ಸಲ್ಲಿಸಲಾಗಿರುತ್ತದೆ. ತೆರವುಗೊಳಿಸುವ ಕಾರ್ಯಾಚರಣೆ ಪೂರ್ಣಗೊಳಿಸಲಾಗದೆ ಅಡಚಣೆಯುಂಟಾದ ಕಾರಣದಿಂದಾಗಿ ಜಂಟಿ ಕಾರ್ಯಾಚರಣೆ ನಡೆಸಲು ಮತ್ತು ಬಿ.ಎಂ.ಟಿ.ಎಫ್., ನಲ್ಲಿ ಪ್ರಕರಣ ದಾಖಲಿಸಲು ಗ್ರಾಮಲೆಕ್ಕಿಗರು, ರಾಜಸ್ವ ನಿರೀಕ್ಷಕರು, ಉಪ ತಹಶೀಲ್ದಾರ್ ರವರು ಜಂಟಿಯಾಗಿ ವರದಿ ಸಲ್ಲಿಸಿರುತ್ತಾರೆ. ಸರ್ವೆ ನಂ. 42ರಲ್ಲಿ 9–18 ಎಕರೆ/ಗುಂಟೆ ಜಮೀನಿನಲ್ಲಿ ಅನಧಿಕೃತ ಬಡಾವಣೆ ನಿರ್ಮಾಣವಾಗಿರುವುದನ್ನು ದಿನಾಂಕ: 28/12/2017ರ ಬೆಳಿಗ್ಗೆ 8:00 ಗಂಟೆ ಸಮಯದಲ್ಲಿ ಹುಣಸಮಾರನಹಳ್ಳಿ ರಾಜಸ್ವ ನಿರೀಕ್ಷಕರು, ಗ್ರಾಮ ಲೆಕ್ಕಿಗರು ಹಾಗೂ ಗ್ರಾಮ ಸಹಾಯಕರೊಂದಿಗೆ ಜೆ.ಸಿ.ಬಿ. ಯಂತ್ರದ ಸಹಾಯದೊಂದಿಗೆ ತೆರವು ಕಾರ್ಯಾಚರಣೆ ಪ್ರಾರಂಭ ಮಾಡಿದ ಕೆಲವೇ ಕ್ಷಣಗಳಲ್ಲಿ ಸದರಿ ಜಮೀನಿನಲ್ಲಿ ಬಡಾವಣೆ ನಿರ್ಮಾಣ ಮಾಡಿದವರು. ಜಮೀನಿನಲ್ಲಿ ಕಟ್ಟಡ ಕಟ್ಟಿರುವವರು, ಕಟ್ಟಡ ನಿರ್ಮಿಸುತ್ತಿರುವವರು ಮತ್ತು ನಿವೇಶನ ಖರೀದಿ ಮಾಡಿದವರು ಮತ್ತು ಹುಣಸಮಾರನಹಳ್ಳಿ, ಸಾತನೂರು, ಕಟ್ಟಿಗೇನಹಳ್ಳಿ, ಕೊಡಗಲಹಟ್ಟಿ ಗ್ರಾಮದ ಗ್ರಾಮಸ್ಥರು, ಸ್ಥಳೀಯ ಮುಖಂಡರುಗಳು ಬಡಾವಣೆ ತೆರವುಗೊಳಿಸಲು ಅಡ್ಡಿಪಡಿಸಿ ಆಕ್ರೋಶ ವ್ಯಕ್ತಪಡಿಸಿರುತ್ತಾರೆ. ಮತ್ತು ಈ ಸಮಯದಲ್ಲಿ ಕಟ್ಟಡಗಳ ಮತ್ತು ನಿವೇಶನಗಳ ಖರೀದಿದಾರರು ನಮ್ಮಗಳ ಸ್ವತ್ತಿನ ದಾಖಲೆಗಳ ನೋಂದಣಿಯನ್ನು ಗ್ರಾಮ ಪಂಚಾಯತಿಯಿಂದಲೇ ಮಾಡಿಕೊಟ್ಟಿದ್ದು ನೀವೇಕೆ ನಮಗೆ ತೊಂದರೆ ನೀಡುತ್ತೀರೆಂದು ತೆರವು ಕಾರ್ಯಾಚರಣೆ ವೇಳೆಯಲ್ಲಿ ಆಕ್ರೋಶದಿಂದ ಮುತ್ತಿಗೆ ಹಾಕಿರುತ್ತಾರೆ. ಕಾರ್ಯಾಚರಣೆ ಕುರಿತು ಸಂಕ್ಷಿಪ್ತ ವರದಿ ರಾಜಸ್ವ ನಿರೀಕ್ಷಕರ ವರದಿ, ಗ್ರಾಮಸ್ಥರ ಮಹಜರ್‌ನೊಂದಿಗೆ ವರದಿಯನ್ನು ಸಲ್ಲಿಸಿದ್ದು ಲಗತ್ತಿಸಲಾಗಿದೆ ಎಂದು ನಮೂದಿಸಿರುತ್ತಾರೆ.

10. ತನಿಖೆಯಿಂದ ಕಂಡುಬಂದ ಅಂಶಗಳು:

(1) ಜಾಲ–2 ಹೋಬಳಿ ಹುಣಸಮಾರನಹಳ್ಳಿ ಗ್ರಾಮದ ಸರ್ವೆ ನಂ. 42ರ 9.18 ಎಕರೆ ಜಮೀನು ಮೂಲತ: ಮಂಜೂರಿ ಜಮೀನಿದ್ದು ಭೂ ಪರಿವರ್ತನೆ ಆದೇಶ ಅಥವಾ ಪ್ರಾಧಿಕಾರದ ಅನುಮೋದನೆ ಇಲ್ಲದೆ ಬಡಾವಣೆ, ಕಟ್ಟಡಗಳನ್ನು ನಿರ್ಮಿಸಿರುತ್ತಾರೆ.

(2) ಅಕ್ರಮ ಬಡಾವಣೆ ಕಟ್ಟಡಗಳ ತೆರವುಗೊಳಿಸಿ ಕ್ರಮ ಜರುಗಿಸಲು ದಿನಾಂಕ: 17/03/2015 ರಂದು 1ನೇ ಎದುರುದಾರರಿಗೆ ದಿನಾಂಕ: 11/08/2015 ರಂದು 2ನೇ ಎದುರುದಾರರಿಗೆ ದೂರು ಸಲ್ಲಿಸಿರುತ್ತಾರೆ.

(3) ದೂರಿನ ಆಧಾರದ ಮೇಲೆ 1ನೇ ಎದುರುದಾರರು LND/NCR/CR/110/2015-16 ಪ್ರಕರಣದಲ್ಲಿ ವಿಚಾರಣೆ ನಡೆಸಿ ದಿನಾಂಕ: 13/04/2016 ರಂದು ಅಕ್ರಮ ಕಟ್ಟಡ ತೆರೆವುಗೊಳಿಸುವಂತೆ ಉಪ ತಹಶೀಲ್ದಾರ್ ರವರಿಗೆ ಆದೇಶ ಮಾಡಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಆದೇಶ ಮಾಡಿರುತ್ತಾರೆ.

(4) ಅಕ್ರಮ ಕಟ್ಟಡದ ಮಾಲೀಕರು ತೆರೆವು ಕಾರ್ಯಕ್ಕೆ ಅಡ್ಡಿ ಪಡಿಸಿದ ಕಾರಣ ದಿನಾಂಕ: 16/06/2015 ರಂದು ಕ್ರೈಂ. ನಂ. 209/2015 ದೂರು U/s 406, 420, 468, 471 IPC and 192(a) KLR ಕಾಯ್ದೆ ರೀತ್ಯಾ ದೂರು ದಾಖಲಿಸಿರುತ್ತಾರೆ.

(5) ದಿನಾಂಕ: 22/07/2016 ರಂದು ಅಕ್ರಮ ಕಟ್ಟಡ ತೆರವುಗೊಳಿಸಲು ಕ್ರಮ ವಹಿಸುವ ಬಗ್ಗೆ ನಿರ್ದೇಶನ ಕೋರಿ ಜಿಲ್ಲಾಧಿಕಾರಿಗಳಿಗೆ 1ನೇ ಎದುರುದಾರರು ಪತ್ರ ರವಾನಿಸಿರುತ್ತಾರೆ.

(6) ದಿನಾಂಕ: 09/03/2017 ರಂದು ನಗರ ಮತ್ತು ಗರಾಮ ಯೋಜನಾ ಕಾಯ್ದೆ ಕಲಂ 17(4)ರ ರೀತ್ಯಾ ಹಾಗೂ ನಿಯಮ 37ರ ರೀತ್ಯಾ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧೀಕಾರ ಕಾಯ್ದೆ ಕಲಂ 32(7) ಮತ್ತು (9) ರಂತೆ ಕಟ್ಟಡ ಮಾಲೀಕರಿಗೆ ನೋಟಿಸು ಜಾರಿ ಮಾಡಿರುತ್ತಾರೆ.

(7) ದಿನಾಂಕ: 04/04/2017 ರಂದು ತೆರವುಗೊಳಿಸುವ ಕುರಿತು ಕ್ರಮ ವಹಿಸಲು ಉಪ ತಹಶೀಲ್ದಾರರು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಕ್ರಮ ಜರುಗಿಸಲು ಕೋರಿ ಪತ್ರ ರವಾನಿಸಿರುತ್ತಾರೆ.

(8) ದಿನಾಂಕ: 18/12/2017 ರಂದು ಜಿಲ್ಲಾಧಿಕಾರಿಗಳು ತಹಶೀಲ್ದಾರ್ ರವರಿಗೆ ನಿಯಮಾನುಸಾರಿ ಕ್ರಮ ವಹಿಸಲು ಸೂಚಿಸಿ ಪತ್ರ ಕಳುಹಿಸಿರುತ್ತಾರೆ.

(9) ದಿನಾಂಕ: 28/12/2017 ರಂದು 8 ಗಂಟೆಗೆ ರಾಜಸ್ವ ನಿರೀಕ್ಷಕರು, ಗ್ರಾಮ ಲೆಕ್ಕಿಗರು ಹಾಗೂ ಗ್ರಾಮ ಸಹಾಯಕರೊಂದಿಗೆ ಉಪ ತಹಶೀಲ್ದಾರರು ಜೆ.ಸಿ.ಬಿ., ಯಂತ್ರದೊಂದಿಗೆ ತೆರವು ಕಾರ್ಯಾಚರಣೆ ಪ್ರಾರಂಭ ಮಾಡಿದ ಕೆಲವೇ ಕ್ಷಣಗಳಲ್ಲಿ ಕಟ್ಟಡ ಮಾಲೀಕರು, ಬಡಾವಣೆ ಮಾಲೀಕರು, ಸ್ಥಳೀಯರು ಸೇರಿ ತೆರವುಗೊಳಿಸಲು ಅಡ್ಡಿಪಡಿಸಿರುತ್ತಾರೆ.

(10) ಈ ಬಗ್ಗೆ ತಹಶೀಲ್ದಾರ್ ರವರಿಗೆ ವರದಿಯನ್ನು ದಿನಾಂಕ: 30/12/2017 ರಂದು ಉಪ ತಹಶೀಲ್ದಾರ್ ರವರು ಸಲ್ಲಿಸಿರುವುದಾಗಿ ವರದಿ ನೀಡಿರುತ್ತಾರೆ.

(11) 3ನೇ ಎದುರುದಾರರು ಪೋಲೀಸ್ ನಿರೀಕ್ಷಕರಿದ್ದು ತೆರೆವುಗೊಳಿಸುವ ಕಾರ್ಯಕ್ಕೆ ಪೋಲೀಸ್ ಭದ್ರತೆ ನೀಡಿ ಸಹಕರಿಸದೆ ಇರುವುದು ಕಂಡುಬಂದಿರುತ್ತದೆ.

12

11. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಜಾಲ–2 ಹೋಬಳಿ ಹುಣಸಮಾರನಹಳ್ಳಿ ಗ್ರಾಮದ ಸರ್ವೆ ನಂ. 42ರ 9.18 ಎಕರೆ/ಗುಂಟೆ ಜಮೀನು ಮೂಲತ: ಮಂಜೂರಿ ಜಮೀನಿದ್ದು ಯಾವುದೇ ಭೂ ಪರಿವರ್ತನೆ ಆದೇಶ ಅಥವಾ ಪ್ರಾಧಿಕಾರದ ಅನುಮೋದನೆ ಇಲ್ಲದೇ ಬಡಾವಣೆ, ಕಟ್ಟಡಗಳನ್ನು ನಿರ್ಮಿಸಿದ್ದು ಬಡಾವಣೆ ತೆರವುಗೊಳಿಸಲು ಎದುರುದಾರರು ಕೈಗೊಂಡ ಕಾರ್ಯಾಚರಣೆ ಪೂರ್ಣಗೊಳದೇ ಗ್ರಾಮಸ್ಥರು, ಮಾಲೀಕರು ಪ್ರತಿರೋಧಿಸಿದ ಕಾರಣ ಅಡಚಣೆಯಾದ ಬಗ್ಗೆ 1ನೇ ಎದುರುದಾರರು ವರದಿ ಸಲ್ಲಿಸಿರುತ್ತಾರೆ. ಅನಧಿಕೃತವಾಗಿ ಬಡಾವಣೆ ನಿರ್ಮಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದ್ದು ಭೂಪರಿವರ್ತನಾ ಶುಲ್ಕ ಇತರೆ ಶುಲ್ಕಗಳನ್ನು ಸರ್ಕಾರಕ್ಕೆ ಪಾವತಿಸದೇ ನಿರ್ಮಿಸಿದ ಬಡಾವಣೆಯು ಕಾನೂನಿಗೆ ವಿರುದ್ಧವಿದ್ದು ಸರ್ಕಾರಕ್ಕೆ ನಷ್ಟ ಉಂಟಾಗಿರುತ್ತದೆ. ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 96ರ ರೀತ್ಯಾ ಕೃಷಿ ಜಮೀನಿನಲ್ಲಿ ನಿರ್ಮಿಸಿರುವ ಅನಧಿಕೃತ ಕಟ್ಟಡ/ಬಡಾವಣೆಗಳನ್ನು ತೆರವುಗೊಳಿಸುವಂತಹ ಅಧಿಕಾರ ಜಿಲ್ಲಾಧಿಕಾರಿಗಳು ಹೊಂದಿರುತ್ತಾರೆ. ಈ ಬಗ್ಗೆ ಕಾನೂನು ರೀತ್ಯಾ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ <u>ಒಂದು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 10/5

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**